# ಮಕ್ಕಳ ಮಾರ್ಗದರ್ಶನ ಕೇಂದ್ರ 'ಪ್ರೇರಣ'

**ಮ**ಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದುಳಿದಿರಬಹುದು. ಸಾಮಾಜಿಕ ಕೌಶಲ್ಯಗಳ ಕೊರತೆಯಿರಬಹುದು. ಶಾಲೆಗೆ ಹೋಗಲು ಹಿಂಜರಿಕೆಯಾಗಿರಬಹುದು. ಶಾಲಾ ಮಕ್ಕಳ ಸಮಸ್ಯೆ ಯಾವುದೇ ಇರಬಹುದು. "ಪ್ರೇರಣ" ಮಾರ್ಗದರ್ಶನ ನೀಡುತ್ತದೆ.





ಆರು ವರ್ಷದ ಮಕ್ಕಳಿಂದ, ಕಾಲೇಜ್ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಮಾರ್ಗದರ್ಶನ ನೀಡುವ ಮೂಲಕ ನಿವಾರಿಸಲು ಸಾಧ್ಯ ಎನ್ನುತ್ತಾರೆ ಪ್ರೇರಣ ಸಂಸ್ಥೆಯ ಮಾರ್ಗದರ್ಶಕಿ ಮೀರಾ ರವಿ.

ಮಕ್ಕಳು ವಯಸ್ಕ ಪ್ರಪಂಚದ ಪ್ರತಿಬಿಂಬ. ಹಲವಾರು ಸಂದರ್ಭಗಳಲ್ಲಿ ಭಾರವಾದ ಭಾವನೆಗಳಿಂದ ಬಳಲುತ್ತಿರುತ್ತಾರೆ. ಅವರು ತಮ್ಮನ್ನು ತಾವು ತಪ್ಪಿತಸ್ಥರು ಎಂದು ನರಳುತ್ತಿರುತ್ತಾರೆ.

ಇಂತಹ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಅತ್ಯಗತ್ಯ. ಮಕ್ಕಳು ತಮ್ಮ ಭಾವನೆಗಳನ್ನು ಹೊರಗೆಡಹಲು ಸೂಕ್ತ ವಾತಾವರಣದ ಅವಶ್ಯಕತೆ ಇರುತ್ತದೆ.

ಮಕ್ಕಳು ತಮ್ಮ ನೋವಿನ ಸಂಗತಿಗಳನ್ನು ನಿಭಾಯಿಸಲು "ಪ್ರೇರಣ" ಸೂಕ್ತ ವಾತಾವರಣ. ಇದರಿಂದ ಮಕ್ಕಳು ಮುಕ್ತವಾಗಿ ತಮ್ಮ ಭಾವನೆಗಳನ್ನು ಹೊರಗೆಡಹುದರ ಜತೆಗೆ ನೋವಿನಿಂದ ಹೊರ ಬರಲು ಸಾಧ್ಯ.

ಮಗು- ಮಾರ್ಗದರ್ಶಕರು ಇವರ ಸಂಬಂಧ ಸ್ವೀಕಾರ, ವಿಶ್ವಾಸ, ನಿರ್ಬಂಧರಹಿತ ಪ್ರೀತಿ ಗೌರವ ಈ ನಾಲ್ಕು ಸ್ತಂಭಗಳ ಆಧಾರದ ಮೇಲೆ ನಿಂತಿರುತ್ತದೆ.

ಪ್ರೇರಣದಲ್ಲಿ ಪ್ಲೇ ಥೆರಪಿ ವಿಧಾನದ ಮೂಲಕ ಸಮಸ್ಯೆ ನಿವಾರಣೆಗೆ ಯತ್ನಿಸಲಾಗುತ್ತದೆ. ಚಿಕ್ಕ ಪ್ರಾಣಿಗಳು, ಕಥೆ ಹೇಳುವುದು, ಚಿತ್ರಗಳನ್ನು ಅರ್ಥ ಮಾಡಿಕೊಳ್ಳುವುದು. ಜೇಡಿ ಮಣ್ಣಿನಲ್ಲಿ ಆಕಾರಗಳನ್ನು ಬಿಡಿಸುವುದು. ಕೈಗೊಂಬೆಗಳು ಹಾಗೂ ಮೃದುವಾದ ಗೊಂಬೆಗಳು ಮತ್ತು ವರ್ಕ್ ಶೀಟ್‌ಗಳು ಮಾರ್ಗದರ್ಶನ ಪ್ರಕ್ರಿಯೆಯಾಗಿರುತ್ತವೆ.

ಮಾರ್ಗದರ್ಶನ ಕೇಂದ್ರದಲ್ಲಿ ಮೀರಾ ರವಿ ತಂದೆ- ತಾಯಂದಿರಿಗೆ ಮಕ್ಕಳನ್ನು ಸಾಕುವುದು ಹೇಗೆ ಎಂಬ ಬಗ್ಗೆ ಕಾರ್ಯಾಗಾರ ನಡೆಸುತ್ತಾರೆ.

ಪ್ರೇರಣಕ್ಕೆ ಹೋಗಬೇಕೆ ? ದೂರವಾಣಿ 26566808 ಅಥವಾ 99800-72005ಗೆ ಸಂಪರ್ಕಿಸಿ.

12-8-06 ವಿಜಿ.